# ಕರಾವಳಿ ತರಂಗಿಣಿ

ಕಡಲ ಕಿನಾರೆಯಿಂದ ಕೆಂಪು ಕೋಟೆಯವರೆಗೆ..

ಕನ್ನಡ ವಾರಪತ್ರಿಕೆ


**ಸುಭಾಷಿತ:**

ಮೌನವು ಮನಸ್ಸನ್ನು ಶುದ್ಧಿ ಮಾಡುವುದು
ಸ್ನಾನವು ದೇಹವನ್ನು ಶುದ್ಧಿ ಮಾಡುವುದು
ಧ್ಯಾನವು ಬುದ್ಧಿಯನ್ನು ಶುದ್ಧಿ ಮಾಡುವುದು
ಸತ್ಯವು ಜ್ಞಾನವನ್ನು ಶುದ್ಧಿ ಮಾಡುವುದು
ಪ್ರಾರ್ಥನೆಯು ಆತ್ಮವನ್ನು ಶುದ್ಧಿ ಮಾಡುವುದು
ದಾನವು ಸಂಪಾದನೆಯನ್ನು ಶುದ್ಧಿ ಮಾಡುವುದು
ಉಪವಾಸ ಆರೋಗ್ಯವನ್ನು ಶುದ್ಧಿ ಮಾಡುವುದು
ಕ್ಷಮೆಯು ಸಂಬಂಧವನ್ನು ಶುದ್ಧಿ ಮಾಡುವುದು
ಧರ್ಮದ ದಾರಿ ಎಲ್ಲವನ್ನು ಶುದ್ಧಿ ಮಾಡುವುದು
ಮಾನವೀಯತೆ ಸ್ವರ್ಗದ ದಾರಿ ತೋರಿಸುವುದು

**ಭಗವಾನ್ ಶ್ರೀಕೃಷ್ಣ**



PRGI No: KNKAN/25/A2498 www.karavalitharangini.com KARAVALI THARANGINI KANNADA Weekly Dakshina Kannada ದಿನಾಂಕ: 24-07-2026 to 30-07-2026 ಬೆಲೆ:10-00 ಸಂಪುಟ–1 ಸಂಚಿಕೆ–43 ಪುಟಗಳು–6









ಇಂದಿನ ಡಿಜಿಟಲ್ ಯುಗದಲ್ಲಿ ಸ್ಮಾರ್ಟ್‌ಫೋನ್ ನಮ್ಮ ಬದುಕಿನ ಪ್ರಮುಖ ಭಾಗವಾಗಿದೆ. ಆದರೆ, ಇದರ ಅತಿಯಾದ ಬಳಕೆ ಮತ್ತು ಅರಿವಿನ ಕೊರತೆಯಿಂದ ಸೈಬರ್ ವಂಚಕರ ಜಾಲ ದಿನದಿಂದ ದಿನಕ್ಕೆ ವಿಸ್ತರಿಸುತ್ತಿದೆ. ಆನ್‌ಲೈನ್ ಲಾಟರಿ, ನಕಲಿ ಲಿಂಕ್‌ಗಳು, ಒಟಿಪಿ ಹಂಚಿಕೊಳ್ಳುವಂತೆ ಮಾಡುವ ವಂಚನೆಗಳು ಇಂದು ಸಾಮಾನ್ಯವಾಗುತ್ತಿವೆ. ಆಮಿಷಗಳಿಗೆ ಬಲಿಪಶುವಾಗಿ ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಕಳೆದುಕೊಳ್ಳುವ ಮುನ್ನ ಎಚ್ಚೆತ್ತುಕೊಳ್ಳುವುದು ಅತ್ಯಗತ್ಯ. ಯಾವುದೇ ಅಪರಿಚಿತ ಸಂದೇಶಗಳನ್ನು, ಲಿಂಕ್‌ಗಳನ್ನು ಅಥವಾ ವ್ಯಕ್ತಿಗಳನ್ನು ಕುರುಡಾಗಿ ನಂಬಬೇಡಿ. ನಿಮ್ಮ ವೈಯಕ್ತಿಕ ಹಾಗೂ ಬ್ಯಾಂಕಿಂಗ್ ಮಾಹಿತಿಯನ್ನು ಯಾರಿಗೂ ನೀಡದಿರಿ. ಸೈಬರ್ ಜಗತ್ತಿನಲ್ಲಿ ಎಚ್ಚರಿಕೆ ಮತ್ತು ಜಾಗರೂಕತೆಯೇ ನಮ್ಮ ಅತ್ಯುತ್ತಮ ರಕ್ಷಣಾ ಕವಚವಾಗಿದೆ.

## ವಿದ್ಯಾರ್ಥಿಗಳ ಭವಿಷ್ಯಕ್ಕಿಂತ ಯಾವುದೂ ಮುಖ್ಯವಲ್ಲ: ಪ್ರಧಾನಿ



**ನವದೆಹಲಿ:** ರಾಷ್ಟ್ರ ರಾಜಧಾನಿಯಲ್ಲಿ ನಡೆಯುತ್ತಿರುವ ವಿದ್ಯಾರ್ಥಿಗಳ ಪ್ರತಿಭಟನೆಯನ್ನು ಉದ್ದೇಶಿಸಿ ಮೊದಲ ಬಾರಿಗೆ ಮಾತನಾಡಿರುವ ಪ್ರಧಾನಿ ನರೇಂದ್ರ ಮೋದಿ, ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳಲ್ಲಿ ಭಾಗಿಯಾದವರಿಗೆ ತ್ವರಿತ ಹಾಗೂ ಕಠಿಣ ಶಿಕ್ಷೆ ವಿಧಿಸುವುದನ್ನು ಖಚಿತಪಡಿಸಲು ತರಿತಗತಿ ನ್ಯಾಯಾಲಯಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂದು ಘೋಷಿಸಿದ್ದಾರೆ. ಈ ಕುರಿತು ಎಕ್ಸ್ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, "ವಿದ್ಯಾರ್ಥಿಗಳ ಕಲ್ಯಾಣ ಮತ್ತು ಭವಿಷ್ಯಕ್ಕಿಂತ ಯಾವುದೂ ಮುಖ್ಯವಲ್ಲ. ಪ್ರಶ್ನೆಪತ್ರಿಕೆ ಸೋರಿಕೆಯಲ್ಲಿ ಭಾಗಿಯಾದವರಿಗೆ ಕಠಿಣ ಮತ್ತು **3ನೇ ಪುಟಕ್ಕೆ**

## ಪ್ರಧಾನ್ ರಾಜೀನಾಮೆ ನೀಡಬೇಕು –ಯು ಟಿ ಖಾದರ್

**ಮಂಗಳೂರು:** ದೇಶಾದ್ಯಂತ ಲಕ್ಷಾಂತರ ಯುವಜನತೆಯ ಶೈಕ್ಷಣಿಕ ಭವಿಷ್ಯವನ್ನು ಕತ್ತಲಿಗೆ ತಳ್ಳಿರುವ ನೀಟ್ ಪರೀಕ್ಷಾ ಅಕ್ರಮ ಮತ್ತು ಪ್ರಶ್ನೆಪತ್ರಿಕೆ ಸೋರಿಕೆ ಆಡಳಿತಾರೂಢ ಕೇಂದ್ರ ಸರ್ಕಾರದ ಬೃಹತ್ ವೈಫಲ್ಯವಾಗಿದ್ದು, ಪರೀಕ್ಷಾ ನಿರ್ವಹಣೆಯ ವೈಫಲ್ಯಕ್ಕೆ ನೈತಿಕ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಕ್ಷಣವೇ ರಾಜೀನಾಮೆ ನೀಡಬೇಕು ಹಾಗೂ ದುರಂತಕ್ಕೀಡಾದ ವಿದ್ಯಾರ್ಥಿಗಳ ಕುಟುಂಬಗಳಿಗೆ ಸೂಕ್ತ ಪರಿಹಾರ ಘೋಷಿಸಬೇಕು ಎಂದು ಸಚಿವ ಯು.ಟಿ. ಖಾದರ್ ಆಗ್ರಹಿಸಿದ್ದಾರೆ. ನಗರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ **3ನೇ ಪುಟಕ್ಕೆ**



## ಶಾಲಾ ಕ್ಯಾಂಟೀನ್‌ನಲ್ಲಿ ಜಂಕ್‌ಫುಡ್‌ಗೆ ಬ್ರೇಕ್..!

**ಮಂಗಳೂರು:** ಇಂದು ಮಕ್ಕಳಿಗೆ ಮನೆ ಅಡುಗೆಗಿಂತ ಜಂಕ್ ಫುಡ್ ಹೆಚ್ಚು ಪ್ರೀಯ. ಈ ಜಂಕ್ ಫುಡ್‌ಗಳಿಂದ ಮಕಳಲ್ಲಿ ಹಲವಾರು ಕಾಯಿಲೆಗಳು ಕಾಣಿಸಿಕೊಳ್ಳುತ್ತಿದೆ. ಅದರಲ್ಲಿಯೂ ಹಾರ್ಮೋನ್‌ಗಳ ಏರುಪೇರು ಮಕ್ಕಳನ್ನು ಕಾಡುತ್ತಿದೆ. ಈ ನಿಟ್ಟಿನಲ್ಲಿ ಮಕ್ಕಳ ಆರೋಗ್ಯವನ್ನು ಗಂಭೀರವಾಗಿ ಪರಿಗಣಿಸಿರುವ ಸರ್ಕಾರ, ಶಾಲೆ ಹಾಗೂ ಆಸ್ಪತ್ರೆಗಳ ಕ್ಯಾಂಟಿನ್‌ಗಳಲ್ಲಿ ಜಂಕ್‌ಫುಡ್ ಮಾರಾಟಕ್ಕೆ ಸಂಪೂರ್ಣ ಬ್ರೇಕ್ ಹಾಕಲು ಗಂಭೀರ ಚಿಂತನೆ ನಡೆಸಿದೆ. ಈ ಮೂಲಕ ಮುಂದಿನ ಪೀಳಿಗೆಯನ್ನು ದೈಹಿಕ **3ನೇ ಪುಟಕ್ಕೆ**








# ಸುದ್ದಿ ತುಣುಕು

ಅಮೆರಿಕ ದೇಶದಿಂದ ಹಣ ಪಡೆದು ದೇಶದಲ್ಲಿ ಜಿರಳೆ ಪಾರ್ಟಿ(ಸಿಜೆಪಿ) ಆರಂಭಿಸಲಾಗಿದೆ. ಇದರ ಮೂಲಕ ಕೇಂದ್ರ ಸರಕಾರದ ವಿರುದ್ಧ ಷಡ್ಯಂತ್ರ ಮಾಡಲಾಗಿದೆ ಎಂದು ವಿಧಾನ ಸಭೆಯ ವಿಪಕ್ಷ ನಾಯಕ ಆರ್.ಅಶೋಕ್ ಆರೋಪಿಸಿದ್ದಾರೆ.

ಕಸ ವಿಲೇವಾರಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ತ್ಯಾಜ್ಯದಿಂದ ವಿದ್ಯುತ್ ತಯಾರಿಸುವ ತಂತ್ರಜ್ಞಾನ ಮತ್ತು ಯೋಜನೆಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದ್ದಾರೆ.

ಪಾದಚಾರಿ ಮಾರ್ಗದಲ್ಲಿ ಮೋಟಾರು ವಾಹನ ಚಲಾಯಿಸುವವರಿಗೆ ದಂಡದ ಮೊತ್ತವನ್ನು 5000 ರೂ.ಗೆ ಹೆಚ್ಚಿಸುವಂತೆ ಒತ್ತಾಯಿಸಿ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣಬೈರೇಗೌಡ ಅವರು ಸಾರಿಗೆ ಸಚಿವರಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.

ಮಳೆ ಕೊರತೆ ಕಾರಣದಿಂದಾಗಿ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿರುವ ಹಿನ್ನೆಲೆ ರಾಜ್ಯ ಸರಕಾರ ಕೂಡಲೇ ಬರ ಘೋಷಣೆ ಮಾಡುವ ಜತೆಗೆ ಪರಿಹಾರ ನೀಡಬೇಕು ಎಂದು ವಿಧಾನಸಭೆಯ ವಿಪಕ್ಷ ನಾಯಕ ಆರ್.ಅಶೋಕ್ ಆಗ್ರಹಿಸಿದ್ದಾರೆ.

ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಗಳ ಶೀಘ್ರ ವಿಚಾರಣೆಗೆ ತ್ವರಿತ ನ್ಯಾಯಾಲಯ ಸ್ಥಾಪಿಸುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಕಾಕ್ರೋಚ್ ಜನತಾ ಪಾರ್ಟಿ ಬಲವಾಗಿ ತಿರಸ್ಕರಿಸಿದ್ದು, ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕೆಂಬ ತನ್ನ ಬೇಡಿಕೆಯನ್ನು ಪುನರುಚ್ಚರಿಸಿದೆ.

77 ಲಕ್ಷಕ್ಕೂ ಹೆಚ್ಚು ವಾರ್ಷಿಕ ಫಾಸ್ಟ್‌ಟ್ಯಾಗ್ ಪಾಸ್ ವಿತರಣೆ ಕೋಟ್ಯಂತರ ರೂ. ವಹಿವಾಟು ನಡೆದಿದೆ ಎಂದು ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಮುಸುಕಿನ ಜೋಳ ತಿಂದು ಜಮೀನಿನಲ್ಲಿಯೇ ಬೀಡು ಬಿಟ್ಟಿದ್ದ ಮರಿಯಾನೆಯನ್ನು ಸಾಕಾನೆಗಳ ನೆರವಿನಿಂದ ಸೆರೆ ಹಿಡಿದು, ಕ್ಯಾಂಪ್‌ಗೆ ಸ್ಥಳಾಂತರ ಮಾಡಲಾಗಿದೆ.

ಯುವಕರ ಭವಿಷ್ಯಕ್ಕೆ ಅತಿ ಹೆಚ್ಚು ಹಾನಿ ಮಾಡಿದ್ದು ನೀವೇ ಮೋದಿಯವರ ತ್ವರಿತ ನ್ಯಾಯಾಲಯ ಘೋಷಣೆಗೆ ರಾಹುಲ್ ಗಾಂಧಿ ತಿರುಗೇಟು ನೀಡಿದ್ದಾರೆ.

ಬೀದಿಬದಿ ವ್ಯಾಪಾರಸ್ಥರ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರ ಕೂಡಲೇ ಪ್ರತ್ಯೇಕ 'ಕಲ್ಯಾಣ ಮಂಡಳಿ' ರಚಿಸಬೇಕು' ಎಂದು ಕಾರ್ಗಿಲ್ ಕಂಪನಿ ಕಾರ್ಮಿಕ ಸಂಘದ ಗೌರವಾಧ್ಯಕ್ಷ ಮಂಜುನಾಥ್ ಕೈದಾಳೆ ಆಗ್ರಹಿಸಿದರು.

ಅಡುಗೆ ಅನಿಲ ಸಿಲಿಂಡರ್ ಸ್ಫೋಟಗೊಂಡು 10 ಮಂದಿಗೆ ಗಂಭೀರ ಗಾಯಗಳಾಗಿರುವ ಘಟನೆ ಆನೇಕಲ್ ತಾಲೂಕಿನ ಬೊಮ್ಮಸಂದ್ರದಲ್ಲಿ ಸಂಭವಿಸಿದೆ.


ಪರೀಕ್ಷಾ ಅಕ್ರಮಗಳನ್ನು ವಿರೋಧಿಸಿ ದೆಹಲಿಯ ಜಂತರ್ ಮಂತರ್‌ನಲ್ಲಿ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ನಡೆಸುತ್ತಿರುವ ಪ್ರತಿಭಟನೆಯ ಕುರಿತು ಉನ್ನತ ಮಟ್ಟದ ತನಿಖೆಗೆ ಆಗ್ರಹಿಸಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆಯನ್ನು ಶುಕ್ರವಾರ ನಡೆಸಲು ದೆಹಲಿ ಹೈಕೋರ್ಟ್ ಒಪ್ಪಿಗೆ ಸೂಚಿಸಿದೆ.

ಜೋರ್ಡಾನ್‌ನ ಅಮೆರಿಕ ವಾಯುನೆಲೆ ಮೇಲೆ ಇರಾನ್ ಡ್ರೋನ್ ದಾಳಿ: ಭಾರತೀಯ ಮೂಲದ ಅಮೆರಿಕ ಸೇನಾ ಸಿಬ್ಬಂದಿ ಮೃತಪಟ್ಟಿರುವ ಸಾಧ್ಯತೆ.

ತನ್ನ ಜಲ ಪ್ರದೇಶದಲ್ಲಿ ಅಕ್ರಮವಾಗಿ ಮೀನುಗಾರಿಕೆ ನಡೆಸುತ್ತಿದ್ದ ಭಾರತದ ಏಳು ಮೀನುಗಾರರನ್ನು ಬಂಧಿಸಲಾಗಿದೆ ಎಂದು ಶ್ರೀಲಂಕಾ ನೌಕಾಪಡೆ ತಿಳಿಸಿದೆ.

ನೀಟ್ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ ಹಗರಣ ಮತ್ತು ವಿದ್ಯಾರ್ಥಿಗಳ ಮೇಲಿನ ಪೊಲೀಸರ ಹಲ್ಲೆ, ದೌರ್ಜನ್ಯದ ಹಿನ್ನೆಲೆಯಲ್ಲಿ ದಿಲ್ಲಿಯಲ್ಲಿ ಪ್ರತಿಭಟನೆಗಳು ತೀವ್ರಗೊಂಡಿವೆ. ಹೀಗಾಗಿ ರಾಜ್ಯ ಸಂಪುಟ ವಿಸ್ತರಣೆಯು ಇನ್ನು ಒಂದು ವಾರ ಕಾಲ ಮುಂದೂಡಿಕೆಯಾದಂತಾಗಿದೆ.

# ಕೊಬ್ಬರಿ ಮಿಠಾಯಿ



**ಬೇಕಾಗುವ ಪದಾರ್ಥಗಳು :**
ತೆಂಗಿನಕಾಯಿ ತುರಿ–2 ಬಟ್ಟಲು, ಸಕ್ಕರೆ– 1.1/2 ಬಟ್ಟಲು, ಎಲ್ಲಕ್ಕಿ– ಪುಡಿ, ತುಪ್ಪ 1 ಚಮಚ ಹಾಲು–ಸ್ವಲ್ಪ

**ಮಾಡುವ ವಿಧಾನ :**
ದಪ್ಪತಳದ ಪಾತ್ರೆಗೆ ಕಾಯಿತುರಿ, ಸಕ್ಕರೆ ಮತ್ತು ಏಲಕ್ಕಿ ಪುಡಿ ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ. ತಟ್ಟೆಗೆ ತುಪ್ಪ ಸವರಿ ಇಟ್ಟುಕೊಳ್ಳಬೇಕು. ಕಾಯಿತುರಿ, ಸಕ್ಕರೆ ಮಿಶ್ರಣವನ್ನು ಒಲೆಯ ಮೇಲಿಟ್ಟು ತಿರುವಬೇಕು. ಸಕ್ಕರೆ ಪೂರ್ತಿಯಾಗಿ ಕರಗುವವರೆಗೂ ಕೈ ಬಿಡದೆ ತಿರುವುತ್ತಿರಬೇಕು ಆಗ ಮಿಶ್ರಣ ತಳದಿಂದ ಮೇಲೆ ಬಿಡುತ್ತದೆ. ತಳದಿಂದ ಬಿಟ್ಟು ಪೂರ್ತಿ ಉಂಡೆಯಾಗುತ್ತದೆ, ತಕ್ಷಣ ತುಪ್ಪ ಸವರಿದ ತಟ್ಟೆಗೆ ಸುರಿದು ಸಮತಟ್ಟಾಗಿ ಹರಡುವುದು. ಮೇಲೆ ಸಮತಟ್ಟಾಗಿ ಬರಲು ಹಾಲಿನಿಂದ ಅದ್ದಿದ ಕೈ ಇಂದ ತಟ್ಟಬಹುದು. ತಕ್ಷಣ ಚಾಕುವಿನಿಂದ ನಮಗೆ ಬೇಕಾದ ಆಕಾರಕ್ಕೆ ಕತ್ತರಿಸಿ ತಣ್ಣಗಾಗಲು ಬಿಡಬೇಕು. ಬಾಯಿಗೆ ಹಾಕಿ ಕೊಂಡರೆ ರುಚಿಕರವಾದ ಮತ್ತು ಕರಗುವಂತ ಕೊಬ್ಬರಿ ಮಿಠಾಯಿ ಸವಿಯಲು ಸಿದ್ಧ.

# ಅಮೆರಿಕ–ಸೌದಿ ಪರಮಾಣು ಒಪ್ಪಂದ



ರಿಯಾಧ್ : ಇರಾನ್ ಹಾಗೂ ಅಮೆರಿಕ ನಡುವಿನ ಉದ್ವಿಗ್ನತೆಯ ಮಧ್ಯೆಯೇ ಕೊಲ್ಲಿ ಪ್ರದೇಶದಲ್ಲಿ ಪ್ರಮುಖ ರಾಜಕೀಯ ಬೆಳವಣಿಗೆಯೊಂದು ನಡೆದಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೌದಿ ಅರೇಬಿಯಾದೊಂದಿಗೆ ಮಹತ್ವದ 30 ವರ್ಷಗಳ ಪರಮಾಣು ಒಪ್ಪಂದಕ್ಕೆ ಅನುಮೋದನೆ ನೀಡಿದ್ದಾರೆ. ಈ ಒಪ್ಪಂದಕ್ಕೆ ಅಮೆರಿಕದ ಶಕ್ತಿ ಕಾರ್ಯದರ್ಶಿ ಕ್ರಿಸ್ ರೈಟ್ ಮತ್ತು ಸೌದಿಯ ಶಕ್ತಿ ಸಚಿವ ಪ್ರಿನ್ಸ್ ಅಬ್ದುಲ್ ಅಜೀಜ್ ಬಿನ್ ಸಲ್ಮಾನ್ ಸಹಿ ಹಾಕಲಿದ್ದು, ಅಮೆರಿಕದ ಕಂಪನಿಗಳು ಸೌದಿ ಅರೇಬಿಯಾದಲ್ಲಿ ಶಾಂತಿಯುತ ಪರಮಾಣು ಇಂಧನ ಕಾರ್ಯಕ್ರಮ ಹಾಗೂ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಭಾಗವಹಿಸಲಿವೆ.


# ಅಮೆರಿಕಕ್ಕೆ ಇರಾನ್ ಗಂಭೀರ ಎಚ್ಚರಿಕೆ

ಇರಾನ್ : ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವ್ಯಾಪಕ ಮಿಲಿಟರಿ ಬೆದರಿಕೆಗಳ ಮಧ್ಯೆ, ತನ್ನ ಆಯಕಟ್ಟಿನ ತೈಲ ಸಂಗ್ರಹಾಗಾರವಾದ ಖಾರ್ಗ್ ದ್ವೀಪವನ್ನು ವಶಪಡಿಸಿಕೊಳ್ಳಲು ಮುಂದಾದರೆ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಇರಾನ್ ತೀವ್ರ ಎಚ್ಚರಿಕೆ ನೀಡಿದೆ. ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಎಸ್ಮಾಯಿಲ್ ಬಘೈ ಈ ಬಗ್ಗೆ ಪ್ರತಿಕ್ರಿಯಿಸಿ, ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (IRGC) ಮತ್ತು ಅಲ್ಲಿನ ಜನರು ಅಮೆರಿಕದ ಪಡೆಗಳನ್ನು ಸ್ವಾಗತಿಸಲು




ಕಾತರದಿಂದ ಕಾಯುತ್ತಿದ್ದಾರೆ ಎಂದು ಸೂಚ್ಯವಾಗಿ ಹೇಳಿದ್ದಾರೆ.

# ಫಿಫಾ ವಿಶ್ವಕಪ್ : ಟ್ರಂಪ್ ಹಂಗಾಮಾ



ನ್ಯೂಯಾರ್ಕ್ : ಮೆಟ್‌ಲೈಫ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫಿಫಾ ವಿಶ್ವಕಪ್ 2026ರ ರೋಮಾಂಚಕ ಫೈನಲ್ ಹಣಾಹಣಿಯಲ್ಲಿ ಸ್ಪೇನ್ ತಂಡವು ಅರ್ಜೆಂಟಿನಾವನ್ನು 1–0 ಅಂತರದಿಂದ ಮಣಿಸಿ ವಿಶ್ವ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಪಂದ್ಯದ ಮುಕ್ತಾಯದ ನಂತರ ನಡೆದ ಸಮಾರೋಪ ಸಮಾರಂಭದಲ್ಲಿ ಡೊನಾಲ್ಡ್ ಟ್ರಂಪ್ ಅವರ ವಿಚಿತ್ರ ವರ್ತನೆ ಈಗ ಇಡೀ ಜಗತ್ತಿನಲ್ಲಿ ತೀವ್ರ ಚರ್ಚೆಗೆ ಹಾಗೂ ವಿವಾದಕ್ಕೆ ಗ್ರಾಸವಾಗಿದೆ. ಅಮೆರಿಕ ಅಧ್ಯಕ್ಷ ಟ್ರಂಪ್ ಅವರು ಸ್ಪೇನ್ ನಾಯಕ ರೋಡ್ರಿಗೆ ವಿಶ್ವಕಪ್ ಟ್ರೋಫಿ ಹಸ್ತಾಂತರಿಸಿದ ಮೇಲೆಯೂ ಕ್ಯಾಮೆರಾ ಫ್ರೇಮ್‌ನಿಂದ ಹೊರಹೋಗದೆ ಅಲ್ಲಿಯೇ ಕಾಲಹರಣ ಮಾಡಲು ಯತ್ನಿಸಿದರು.

# ಹಾರ್ಮುಜ್ ಜಲಸಂಧಿ ವಶಕ್ಕೆ ಮುಂದಾದ ಟ್ರಂಪ್

ತೆಹರಾನ್: ಅಮೆರಿಕ ಮತ್ತು ಇರಾನ್ ನಡುವೆ ಹಿಂದೆಂದೂ ಕಾಣದ ರೀತಿಯ ಅತ್ಯಂತ ರಕ್ತಸಿಕ್ತ ಹಾಗೂ ಭಯಾನಕ ಯುದ್ಧ ಆರಂಭವಾಗಿದ್ದು, ಪಶ್ಚಿಮ ಏಷ್ಯಾದಲ್ಲಿ ಭೀತಿಯ ವಾತಾವರಣ ಸೃಷ್ಟಿಯಾಗಿದೆ. ಕಳೆದ ಎಂಟು ದಿನಗಳಿಂದ ಅಮೆರಿಕ ಮಿಲಿಟರಿ ಹಗಲು–ರಾತ್ರಿ ಎನ್ನದೆ ಇರಾನ್ ಮೇಲೆ ಪಟ್ಟುಬಿಡದೆ ವಾಯು ಮತ್ತು ಕ್ಷಿಪಣಿ ದಾಳಿಗಳನ್ನು ನಡೆಸುತ್ತಿದ್ದು, ಇರಾನ್‌ನ ಇಡೀ ರಕ್ಷಣಾ ವ್ಯವಸ್ಥೆಯನ್ನೇ ಪುಡಿಗಟ್ಟುತ್ತಿದೆ. ಜಗತ್ತನ್ನು ಬೆದರಿಸಲು ಇರಾನ್ ತನ್ನ ಅತಿದೊಡ್ಡ ಅಸ್ತ್ರವಾಗಿ ಬಳಸಿಕೊಳ್ಳುತ್ತಿದ್ದ ಹಾರ್ಮುಜ್ ಜಲಸಂಧಿಯನ್ನು



ಪ್ರವೇಶಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್‌ನ ಬೆನ್ನುಮೂಳೆಯನ್ನು ಮುರಿಯಲು ಮುಂದಾಗಿದ್ದಾರೆ.

# ಬಲೂಚಿಸ್ತಾನ ಸ್ವಾತಂತ್ರ್ಯ ಘೋಷಣೆ



ಇಸ್ಲಾಮಾಬಾದ್ : ದಶಕಗಳಿಂದ ನಡೆಯುತ್ತಿರುವ ಸಶಸ್ತ್ರ ಹೋರಾಟದ ಮುಂದುವರಿದ ಭಾಗವಾಗಿ ಬಲೂಚಿಸ್ತಾನವು ಪ್ರತ್ಯೇಕ ಸ್ವಾತಂತ್ರ್ಯ ಘೋಷಿಸಿಕೊಂಡಿದ್ದು, ಇದು ಪಾಕಿಸ್ತಾನದ ಆಂತರಿಕ ಭದ್ರತೆ ಮತ್ತು ಭೌಗೋಳಿಕ ರಾಜಕೀಯದ ದೃಷ್ಟಿಯಿಂದ ಅತ್ಯಂತ ಸೂಕ್ಷ್ಮ ಹಾಗೂ ಗಂಭೀರ ವಿಚಾರವಾಗಿ ಪರಿಣಮಿಸಿದೆ. ಪಾಕಿಸ್ತಾನ ಆಕ್ರಮಿತ ಕಾಶ್ಮೀರ (PoK) ವಿಷಯಕ್ಕಿಂತಲೂ ಬಲೂಚಿಸ್ತಾನದಲ್ಲಿ ನಡೆಯುತ್ತಿರುವ ಈ ತಾಜಾ ಬೆಳವಣಿಗೆಗಳು ಇಸ್ಲಾಮಾಬಾದ್‌ಗೆ ತೀವ್ರ ಆತಂಕವನ್ನು ಉಂಟುಮಾಡುತ್ತಿವೆ.

# ಮಹಿಳಾ ಹಾಕಿ ವಿಶ್ವಕಪ್: ಭಾರತ ತಂಡ ಘೋಷಣೆ

ಚೆನ್ನೈ : ಮುಂಬರುವ ಎಫ್‌ಐಎಚ್ ಮಹಿಳೆಯರ ಹಾಕಿ ವಿಶ್ವಕಪ್ ಟೂರ್ನಿಗಾಗಿ ಹಾಕಿ ಇಂಡಿಯಾ ಶುಕ್ರವಾರ 20 ಸದಸ್ಯರ ಬಲಿಷ್ಠ ಭಾರತೀಯ ತಂಡವನ್ನು ಪ್ರಕಟಿಸಿದೆ. ಮಿಡ್ ಫೀಲ್ಡರ್ ಸಲಿಮಾ ಟೇಟೆ ಅವರು ಈ ತಂಡವನ್ನು ನಾಯಕಿಯಾಗಿ ಮುನ್ನಡೆಸಲಿದ್ದಾರೆ. ಈ ಮಹತ್ವದ ವಿಶ್ವಕಪ್ ಜಾಗತಿಕ ಟೂರ್ನಿಯನ್ನು ಆಗಸ್ಟ್ 15 ರಿಂದ 30 ರವರೆಗೆ ನೆದರ್‌ಲ್ಯಾಂಡ್ಸ್ ಹಾಗೂ ಬೆಲ್ಜಿಯಂ ಜಂಟಿಯಾಗಿ ಆಯೋಜಿಸಲಿವೆ.




# ದೇಶಿ ಕ್ರಿಕೆಟ್‌ಗೆ ಬಿಸಿಸಿಐ ಕಠಿಣ ನಿರ್ಧಾರ



ಹೈದರಬಾದ್ : ಭಾರತೀಯ ದೇಶಿ ಕ್ರಿಕೆಟ್‌ನಲ್ಲಿ ಪಂದ್ಯದ ಪಾವಿತ್ರ್ಯತೆ, ಶಿಸ್ತು ಮತ್ತು ತಾಂತ್ರಿಕ ನಿಖರತೆಯನ್ನು ಹೆಚ್ಚಿಸಲು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಅತ್ಯಂತ ಕಠಿಣ ನಿಯಮಗಳನ್ನು ಪರಿಚಯಿಸಿದೆ. ಮುಂಬರುವ 2026–27ರ ದೇಶಿಯ ಕ್ರಿಕೆಟ್ ಸೀಸನ್‌ನಿಂದ, ಅಂದರೆ ಮುಂಬರುವ ದುಲೀಪ್ ಟ್ರೋಫಿ ಟೂರ್ನಿಯಿಂದಲೇ ಈ ನಿಯಮಗಳು ಜಾರಿಗೆ ಬರಲಿವೆ.

# ಗುಕೇಶ್ ಮಣಿಸಿದ ಅರ್ಜುನ್ ಎರಿಗೈಸಿ

ಚೆನ್ನೈ : ಚೆನ್ನೈ ಗ್ರಾಂಡ್ ಮಾಸ್ಟರ್ಸ್ 2026ರ ಐದನೇ ಸುತ್ತಿನ ಪಂದ್ಯದಲ್ಲಿ ಭಾರತದ ಗ್ರಾಂಡ್ ಮಾಸ್ಟರ್ ಅರ್ಜುನ್ ಎರಿಗೈಸಿ ಅವರು ವಿಶ್ವ ಚಾಂಪಿಯನ್ ಡಿ. ಗುಕೇಶ್ ಅವರನ್ನು ಮಣಿಸಿ ಜಂಟಿ ಅಗ್ರಸ್ಥಾನಕ್ಕೇರಿದ್ದಾರೆ. ತಮಿಳುನಾಡಿನ 7 ವರ್ಷದ ಉದಯೋನ್ಮುಖ ಆಟಗಾರ ಜೇಶುವಾ ಜೆ ಅವರ ಸಾಂಕೇತಿಕ ಆರಂಭಿಕ ನಡೆಯೊಂದಿಗೆ ಪಂದ್ಯ ಆರಂಭವಾಯಿತು. ಪಂದ್ಯದಲ್ಲಿ ಎರಿಗೈಸಿ ಕಪ್ಪು ಕಾಯಿಗಳೊಂದಿಗೆ ಭದ್ರವಾದ ಪ್ರದರ್ಶನ ನೀಡಿದರು ಮತ್ತು ಆರಂಭದಲ್ಲಿ ಅನಗತ್ಯ ಅಪಾಯಗಳನ್ನು



ತೆಗೆದುಕೊಳ್ಳುವುದನ್ನು ತಡೆದರು.

# ನನ್ನನ್ನು ರಾಜಕೀಯವಾಗಿ ಮುಗಿಸಲು ಷಡ್ಯಂತ್ರ: ಬಿ.ಕೆ. ಹರಿಪ್ರಸಾದ್



ಬೆಂಗಳೂರು : ಕೆಲವರು ನನ್ನನ್ನು ರಾಜಕೀಯವಾಗಿ ಮುಗಿಸಲು ಷಡ್ಯಂತ್ರ ನಡೆಸುತ್ತಿದ್ದಾರೆ ಎಂದು ಹಿರಿಯ ಕಾಂಗ್ರೆಸ್ ನಾಯಕ ಬಿ.ಕೆ. ಹರಿಪ್ರಸಾದ್ ಗಂಭೀರ ಆರೋಪ ಮಾಡಿದ್ದಾರೆ. ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮಗೆ ಸಚಿವ ಸಂಪುಟದಲ್ಲಿ ಸ್ಥಾನ ಸಿಗುವ ಕುರಿತು ಕೇಳಲಾದ ಪ್ರಶ್ನೆಗೆ ಪ್ರತಿಕ್ರಿಯಿಸಿ, ಸಂಪುಟ ವಿಸ್ತರಣೆಯ ನಿರ್ಧಾರವನ್ನು ಮುಖ್ಯಮಂತ್ರಿಗಳೇ ತೆಗೆದುಕೊಳ್ಳಬೇಕು. ಪಕ್ಷದಲ್ಲಿ 140 ಶಾಸಕರಿದ್ದು, ಯಾರನ್ನು ಸಂಪುಟಕ್ಕೆ ಸೇರಿಸಿಕೊಳ್ಳಬೇಕು ಎಂಬುದನ್ನು ಹೈಕಮಾಂಡ್ ವರಿಷ್ಠರು ತೀರ್ಮಾನಿಸಲಿದ್ದಾರೆ ಎಂದು ಸ್ಪಷ್ಟಪಡಿಸಿದರು.

# ರಸ್ತೆ ಅಪಘಾತಕ್ಕೊಳಗಾದವರಿಗೆ 2.5 ಲಕ್ಷ ಉಚಿತ ಚಿಕಿತ್ಸೆ: ಯು.ಟಿ. ಖಾದರ್

ಕಾರವಾರ : ಕರ್ನಾಟಕದಲ್ಲಿ ರಸ್ತೆ ಅಪಘಾತಕ್ಕೊಳಗಾದರೆ, ಆಸ್ಪತ್ರೆಗೆ ದಾಖಲಾದ ಮೊದಲ 7 ದಿನಗಳವರೆಗೆ 2.5 ಲಕ್ಷದವರೆಗೆ ಉಚಿತ ಚಿಕಿತ್ಸೆ ನೀಡುವ ಅತ್ಯಂತ ಮಹತ್ವಾಕಾಂಕ್ಷೆಯ ಯೋಜನೆಯನ್ನು ಜಾರಿಗೊಳಿಸಲು ಸರ್ಕಾರ ಚಿಂತನೆ ನಡೆಸಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್



ತಿಳಿಸಿದ್ದಾರೆ. ರಾಜ್ಯದಲ್ಲಿ ತುರ್ತು ಕರೆ ಬಂದ 15 ನಿಮಿಷಗಳಲ್ಲಿ ಆಂಬ್ಯುಲೆನ್ಸ್ ಸ್ಥಳಕ್ಕೆ ತಲುಪುವ ಹೊಸ ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತಿದ್ದು, ನಿಯಮಿತ ಸಮಯದಲ್ಲಿ ಆಂಬ್ಯುಲೆನ್ಸ್ ಬರದಿದ್ದರೆ ನಿರ್ವಹಣಾ ಸಂಸ್ಥೆಗೆ ದಂಡ ವಿಧಿಸುವ ಕಾಯ್ದೆ ತರಲಾಗುವುದು ಎಂದು ಸಚಿವರು ಹೇಳಿದರು.

# ಬಿಡದಿ ಟೌನ್‌ಶಿಪ್ ವಿರುದ್ಧ ಜೆಡಿಎಸ್ ಪ್ರತ್ಯೇಕ ಪಾದಯಾತ್ರೆ ಘೋಷಣೆ

ಬೆಂಗಳೂರು : ಬಿಡದಿ ಟೌನ್‌ಶಿಪ್ ಯೋಜನೆ ವಿರುದ್ಧ ಬಿಜೆಪಿ ಪಾದಯಾತ್ರೆ ಘೋಷಿಸಿದ ಬೆನ್ನಲ್ಲೇ, ಜೆಡಿಎಸ್ ಕೂಡ ಪ್ರತ್ಯೇಕವಾಗಿ ಹೋರಾಟಕ್ಕೆ ಧುಮುಕಲು ಸಜ್ಜಾಗಿದೆ. ಜುಲೈ 31ರಿಂದ ಆಗಸ್ಟ್ 1ರವರೆಗೆ ಬಿಡದಿಯಿಂದ ಬೆಂಗಳೂರಿಗೆ ಪ್ರತ್ಯೇಕ ಪಾದಯಾತ್ರೆ ನಡೆಸುವುದಾಗಿ ಜೆಡಿಎಸ್ ಪ್ರಕಟಿಸಿದ್ದು, ರಾಜಕೀಯ ವಲಯದಲ್ಲಿ ತೀವ್ರ ಕುತೂಹಲ ಮೂಡಿಸಿದೆ. ಬೆಂಗಳೂರಿನ ಜೆ.ಪಿ. ಭವನದಲ್ಲಿ ಶನಿವಾರ ಜಂಟಿ ಮಾಧ್ಯಮಗೋಷ್ಠಿ ನಡೆಸಿದ ಜೆಡಿಎಲ್‌ಪಿ ನಾಯಕ ಸುರೇಶ ಬಾಬು ಮತ್ತು ಕೋರ್ ಕಮಿಟಿ ಅಧ್ಯಕ್ಷ ಕೃಷ್ಣ ರೆಡ್ಡಿ ಅವರು ಪಾದಯಾತ್ರೆಯ ದಿನಾಂಕವನ್ನು ಅಧಿಕೃತಗೊಳಿಸಿದರು.



# ಮನೆ ಬಾಗಿಲಿಗೇ ಉಚಿತ ಜಾತಿ, ನಿವಾಸ ಪ್ರಮಾಣಪತ್ರ !

ಬೆಂಗಳೂರು : ರಾಜ್ಯದ ನಾಗರಿಕರು ಇನ್ನು ಮುಂದೆ ಜಾತಿ ಮತ್ತು ಶಾಶ್ವತ ನಿವಾಸ ಪ್ರಮಾಣಪತ್ರಗಳನ್ನು (ಪಿಆರ್‌ಸಿ) ಪಡೆಯಲು ಸರ್ಕಾರಿ ಕಚೇರಿಗಳಿಗೆ ಅಲೆದಾಡುವ ಅಗತ್ಯವಿಲ್ಲ. ಸಾರ್ವಜನಿಕರ ಅನುಕೂಲಕ್ಕಾಗಿ ಈ ಪ್ರಮಾಣಪತ್ರಗಳನ್ನು ಮನೆಮನೆಗೆ ಉಚಿತವಾಗಿ ತಲುಪಿಸುವ ಮಹತ್ವಾಕಾಂಕ್ಷಿ ಯೋಜನೆಗೆ



ರಾಜ್ಯ ಸರ್ಕಾರ ಅಧಿಕೃತವಾಗಿ ಚಾಲನೆ ನೀಡಿದೆ. ಇದರಿಂದಾಗಿ ನಾಗರಿಕರು ಕಚೇರಿಗಳಿಗೆ ಹತ್ತಾರು ಬಾರಿ ಅಲೆಯುವುದು ತಪ್ಪಲಿದ್ದು, ಕಾಲಮಿತಿಯೊಳಗೆ ಸೇವೆ ಸಿಗುವಂತಾಗಲಿದೆ ಎಂದು ಉಪಮುಖ್ಯಮಂತ್ರಿ ಹಾಗೂ ಕಂದಾಯ ಸಚಿವ ಡಾ. ಜಿ. ಪರಮೇಶ್ವರ್ ಅವರು ತಿಳಿಸಿದ್ದಾರೆ.

# ಬೆಮುಲ್‌ಗೆ ಎಮ್ಮೆ ಹಾಲು ಪೂರೈಸಿ : ಬಾಲಚಂದ್ರ ಜಾರಕಿಹೊಳಿ



ಮಂಗಳೂರು : ನಗರದ ಗಾಂಧಿ ಭವನದಲ್ಲಿ ನಡೆದ ಬೆಳಗಾವಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ (ಬೆಮುಲ್) ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಅವರು ರೈತರಿಗೆ ಕನಿಷ್ಠ ಶೇ 50ರಷ್ಟು ಎಮ್ಮೆ ಹಾಲನ್ನು ಒಕ್ಕೂಟಕ್ಕೇ ಪೂರೈಸುವಂತೆ ಕರೆ ನೀಡಿದ್ದಾರೆ. ಒಕ್ಕೂಟದ ವ್ಯಾಪ್ತಿಯ 669 ಸಂಘಗಳ ಪೈಕಿ 215 ಸಂಘಗಳು ಇದುವರೆಗೆ ಒಂದು ಲೀಟರ್ ಎಮ್ಮೆ ಹಾಲನ್ನೂ ಪೂರೈಸದ ಕಾರಣ, ಮೊಸರು ಮತ್ತು ತುಪ್ಪದಂತಹ ಮೌಲ್ಯವರ್ಧಿತ ಉತ್ಪನ್ನಗಳ ಮಾರುಕಟ್ಟೆಯಲ್ಲಿ ಬೆಮುಲ್‌ಗೆ ಹಿನ್ನಡೆಯಾಗುತ್ತಿದೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

# ಶಿಕ್ಷಕರ ನೇಮಕಾತಿಗೆ ಮುಖ್ಯಮಂತ್ರಿ ನೇತೃತ್ವದ ಸಂಪುಟ ಅಸ್ತು


ಬೆಂಗಳೂರು : ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಭರ್ತಿಯನ್ನು ಎದುರು ನೋಡುತ್ತಿದ್ದವರಿಗೆ ರಾಜ್ಯ ಸರ್ಕಾರವು ಭರ್ಜರಿ ಸಿಹಿ ಸುದ್ದಿ ನೀಡಿದೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ನಡೆದ ಮಹತ್ವದ ಸಚಿವ ಸಂಪುಟ ಸಭೆಯಲ್ಲಿ ಸುಮಾರು 15 ಸಾವಿರ ಶಿಕ್ಷಕರ ನೇಮಕಾತಿಗೆ



ಸಂಬಂಧಿಸಿದಂತೆ ಅಧಿಕೃತ ಅನುಮೋದನೆ ನೀಡಲಾಗಿದೆ. ರಾಜ್ಯದಲ್ಲಿ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ನಿಟ್ಟಿನಲ್ಲಿ ಮತ್ತು ಸರ್ಕಾರಿ ಶಾಲೆಗಳಲ್ಲಿನ ಶಿಕ್ಷಕರ ಕೊರತೆಯನ್ನು ನೀಗಿಸಲು ಈ ಬೃಹತ್ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

# ಸಿಜೆಪಿ ಪ್ರತಿಭಟನೆಯಲ್ಲಿ ವಿವಾದಾತ್ಮಕ ಘೋಷಣೆಗಳ ಕೂಗು!

ನವದೆಹಲಿ : ನೀಟ್ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಅಕ್ರಮಗಳನ್ನು ಖಂಡಿಸಿ ದೆಹಲಿಯಲ್ಲಿ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದ್ದ 'ಚಲೋ ಸಂಸತ್' ಪ್ರತಿಭಟನಾ ರ್‍ಯಾಲಿ ತೀವ್ರ ಸ್ವರೂಪ ಪಡೆದುಕೊಂಡು ದೊಡ್ಡ ವಿವಾದಕ್ಕೆ ಕಾರಣವಾಗಿದೆ. ಜಂತರ್ ಮಂತರ್‌ನಿಂದ ಸಂಸತ್ ಭವನದತ್ತ ಪಾದಯಾತ್ರೆ ನಡೆಸಿದ ಪ್ರತಿಭಟನಾಕಾರರು ದೇಶದ ಶಿಕ್ಷಣ ವ್ಯವಸ್ಥೆಯನ್ನು ಸರಿಪಡಿಸಬೇಕು ಮತ್ತು ಪರೀಕ್ಷಾ ಅಕ್ರಮಗಳ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ತಕ್ಷಣವೇ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.




# ಬಂಡಾಯ ಸಂಸದರನ್ನು ಆಹ್ವಾನಿಸಿದ ಸ್ಪೀಕರ್: ವಿಪಕ್ಷಗಳ ವಾಕ್‌ಔಟ್!

ನವದೆಹಲಿ : ಸಂಸತ್ತಿನ ಮುಂಗಾರು ಅಧಿವೇಶನ ಆರಂಭಕ್ಕೂ ಮುನ್ನವೇ ಕೇಂದ್ರ ಸರ್ಕಾರ ಮತ್ತು ವಿರೋಧ ಪಕ್ಷಗಳ ನಡುವಿನ ರಾಜಕೀಯ ಸಂಘರ್ಷ ತಾರಕಕ್ಕೇರಿದೆ. ಸರ್ವಪಕ್ಷ ಸಭೆಗೆ ತೃಣಮೂಲ ಕಾಂಗ್ರೆಸ್ ಮತ್ತು ಶಿವಸೇನಾ ಪಕ್ಷದ ಬಂಡಾಯ ಸಂಸದರನ್ನು ಆಹ್ವಾನಿಸಿದ ಲೋಕಸಭಾ ಸ್ಪೀಕರ್ ಕ್ರಮವನ್ನು



ಖಂಡಿಸಿ, ಕಾಂಗ್ರೆಸ್ ನೇತೃತ್ವದ ಇಂಡಿಯಾ ಒಕ್ಕೂಟ ಸಭೆಯಿಂದ ಹೊರನಡೆದಿದೆ. ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆಯೊಂದಿಗೆ, ಉದ್ಧವ್ ಬಣದ ಆರು ಬಂಡಾಯ ಸಂಸದರ ವಿಲೀನಕ್ಕೆ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಇತ್ತೀಚೆಗಷ್ಟೇ ಅನುಮೋದನೆ ನೀಡಿದ್ದರು.

# 11 ವರ್ಷಗಳಲ್ಲಿ ಭಾರತದ ಸಾರ್ವಜನಿಕ ಸಾಲ 201.17 ಲಕ್ಷ ಕೋಟಿಗೆ ಏರಿಕೆ!




ನವದೆಹಲಿ:ಕೇಂದ್ರ ಸರ್ಕಾರದ ಒಟ್ಟು ಸಾರ್ವಜನಿಕ ಸಾಲವು ಕಳೆದ 11 ವರ್ಷಗಳಲ್ಲಿ ಮೂರು ಪಟ್ಟು ಹೆಚ್ಚಳ ಕಂಡಿದೆ. ಅಂಕಿ ಅಂಶಗಳ ಪ್ರಕಾರ, 2014–15ರ ಹಣಕಾಸು ವರ್ಷದ ಅಂತ್ಯದಲ್ಲಿ 64.11ಲಕ್ಷ ಕೋಟಿಯಷ್ಟಿದ್ದ ಸಾರ್ವಜನಿಕ ಸಾಲವು 2025–26ರ ಹಣಕಾಸು ವರ್ಷದ ಅಂತ್ಯದ ವೇಳೆಗೆ (ತಾತ್ಕಾಲಿಕ ಅಂಕಿ ಅಂಶ) 201.17 ಲಕ್ಷ ಕೋಟಿಗೆ ಏರಿಕೆಯಾಗಿದೆ. ಲೋಕಸಭೆಯ ಪ್ರಶ್ನೋತ್ತರ ಅವಧಿಯಲ್ಲಿ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ಈ ಮಾಹಿತಿ ನೀಡಿದ್ದು, 11 ವರ್ಷಗಳ ಅವಧಿಯಲ್ಲಿ ಕೇಂದ್ರ ಸರ್ಕಾರದ ಒಟ್ಟು ಬಾಕಿ ಸಾಲದಲ್ಲಿ 137.06 ಲಕ್ಷ ಕೋಟಿ ಹೆಚ್ಚಳವಾಗಿದೆ ಎಂದು ತಿಳಿಸಿದ್ದಾರೆ.

# ಶ್ರೀರಾಮನ ನಿಂದನೆ ಆರೋಪ : ಅಭಿಜಿತ್ ದೀಪ್ಕೆ ಮುಖಕ್ಕೆ ಮಸಿ!

ನವದೆಹಲಿ : ಸಿಜೆಪಿ ಸ್ಥಾಪಕ ಅಭಿಜಿತ್ ದೀಪ್ಕೆ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡುತ್ತಿದ್ದರು. ಈ ಸಂದರ್ಭದಲ್ಲಿ ಅಲ್ಲಿಗೆ ಬಂದ ಮಹಿಳೆಯೊಬ್ಬರು ಹಠಾತ್ತಾಗಿ ಅಭಿಜಿತ್ ದೀಪ್ಕೆ ಅವರ ಮುಖಕ್ಕೆ ಮಸಿ (ಶಾಯಿ) ಬಳಿದಿದ್ದಾರೆ. ಸ್ಪಷ್ಟೀಕರಣ ನೀಡಿದ ಮಹಿಳೆ "ನಾನು ಬರ್ಖಾ ಟ್ರೆಹಾನ್. ಆ ನಗರ ನಕ್ಸಲ್ ಅಭಿಜಿತ್ ದೀಪ್ಕೆ



ಪ್ರಭು ಶ್ರೀರಾಮನನ್ನು ಅಪಹಾಸ್ಯ ಮಾಡುತ್ತಾ ನಗುತ್ತಿದ್ದ. ನಾನೊಬ್ಬಳು ಖಟ್ಟರ್ ಹಿಂದೂ ಆಗಿರುವ ಕಾರಣಕ್ಕೆ ಅವನ ಮುಖಕ್ಕೆ ಮಸಿ ಬಳಿದಿದ್ದೇನೆ. ನಾನೊಬ್ಬ ಹಿಂದೂ ಯುವತಿಯಾಗಿ ನನಗೆ ಅಭಿಜಿತ್ ದೀಪ್ಕೆ ನನ್ನ ದೇವರ ಮೇಲೆ ಮಾಡಿರುವ ಹಾಸ್ಯವನ್ನು ಸಹಿಸಿಕೊಳ್ಳಲು ಆಗಲಿಲ್ಲ ಎಂದರು.

# ಮರುಜೀವ ಪಡೆದ ಸ್ವದೇಶಿ ಯುದ್ಧವಿಮಾನ ಎಂಜಿನ್ ಯೋಜನೆ 'ಕಾವೇರಿ 2.0'

ನವದೆಹಲಿ : ಸುಮಾರು ನಾಲ್ಕು ದಶಕಗಳ ಹಿಂದೆ ಆರಂಭವಾಗಿದ್ದ ಭಾರತದ ಸ್ವದೇಶಿ 'ಕಾವೇರಿ' ವಿಮಾನ ಎಂಜಿನ್ ಯೋಜನೆ ಇದೀಗ ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ 'ಕಾವೇರಿ 2.0' ರೂಪದಲ್ಲಿ ಮರುಜೀವ ಪಡೆಯುತ್ತಿದೆ. ಆರಂಭದಲ್ಲಿ 'ತೇಜಸ್' ಯುದ್ಧವಿಮಾನದ ಅಗತ್ಯ ತಾಂತ್ರಿಕ ಮಾನದಂಡಗಳನ್ನು ಪೂರೈಸಲು ವಿಫಲವಾಗಿದ್ದ ಈ ಯೋಜನೆಯು ಈಗ ಸಂಪೂರ್ಣ ನೂತನ ವಿನ್ಯಾಸದೊಂದಿಗೆ ದೇಶಾದ್ಯಂತ ಮತ್ತೆ ದೊಡ್ಡ ಮಟ್ಟದ ಚರ್ಚೆಯಲ್ಲಿದೆ. ಡಿಆರ್‌ಡಿಒದ 'ಗ್ಯಾಸ್ ಟರ್ಬೈನ್ ರಿಸರ್ಚ್ ಎಸ್ಟಾಬ್ಲಿಷ್‌ಮೆಂಟ್' (GTRE) ವಿಜ್ಞಾನಿಗಳು ಈ ಯೋಜನೆಗೆ ಹೊಸ ರೂಪ ನೀಡಿದೆ.






ಕರಾವಳಿ ತರಂಗಿಣಿ

# ಸಿನಿ ತರಂಗಿಣಿ

## ಸಿನಿಲೋಕದ ಧ್ರುವತಾರೆ ಸಾಹಿತಿ ಚಿ. ಉದಯಶಂಕರ್



ಕನ್ನಡ ಚಿತ್ರರಂಗದ ಇತಿಹಾಸದ ಪುಟಗಳನ್ನು ತಿರುವಿ ನೋಡಿದರೆ, ಅಲ್ಲಿ ಪ್ರತಿಯೊಂದು ಯಶಸ್ವಿ ಸಿನಿಮಾದ ಹಿನ್ನೆಲೆಯಲ್ಲೂ ಸ್ಪಷ್ಟವಾಗಿ ಕೇಳಿಸುವ ಮತ್ತು ಕಾಣಿಸುವ ಹೆಸರು ಚಿ. ಉದಯಶಂಕರ್. ಗೀತರಚನೆಕಾರರಾಗಿ, ಸಂಭಾಷಣೆಕಾರರಾಗಿ ಹಾಗೂ ಕಥೆಗಾರರಾಗಿ ಕನ್ನಡ ಚಿತ್ರರಂಗವನ್ನು ಮೂರು ದಶಕಗಳ ಕಾಲ ತಮ್ಮ ಸಾಹಿತ್ಯಿಕ ಶಕ್ತಿಯಿಂದ ಆಳಿದ ಅಪರೂಪದ ಮಹಾನ್ ಚೇತನ ಇವರು. ಕಠಿಣವಾದ ತತ್ವಗಳನ್ನು, ಗಂಭೀರ ಭಾವನೆಗಳನ್ನು ತೀರಾ ಸರಳ ಪದಗಳಲ್ಲಿ ಕನ್ನಡಿಗರ ಹೃದಯಕ್ಕೆ ತಲುಪಿಸಿದ ಬರವಣಿಗೆಯ ಮಾಂತ್ರಿಕ ಚಿ. ಉದಯಶಂಕರ್. ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಚಿಟ್ಟನಹಳ್ಳಿಯಲ್ಲಿ ಫೆಬ್ರವರಿ 18, 1934 ರಂದು ಜನಿಸಿದ ಉದಯಶಂಕರ್ ಅವರಿಗೆ ಸಾಹಿತ್ಯ ಮತ್ತು ರಂಗಭೂಮಿಯ ವಾತಾವರಣ ಬಾಲ್ಯದಿಂದಲೇ ಬಳುವಳಿಯಾಗಿ ಬಂದಿತ್ತು. ಇವರ ತಂದೆ ಚಿ. ಸದಾಶಿವಯ್ಯ ಅವರು ಕನ್ನಡ ರಂಗಭೂಮಿ ಮತ್ತು ಚಿತ್ರರಂಗದ ಪ್ರಸಿದ್ಧ ಕಥೆಗಾರ ಹಾಗೂ ಗೀತರಚನೆಕಾರರಾಗಿದ್ದರು. ಮನೆಯಲ್ಲಿದ್ದ ಸಾಹಿತ್ಯದ ವಾತಾವರಣವು ಉದಯಶಂಕರ್ ಅವರಲ್ಲಿ ಬಾಲ್ಯದಲ್ಲೇ ಕಾವ್ಯಾಸಕ್ತಿಯನ್ನು ಚಿಗುರಿಸಿತು. ತಂದೆಯ ಮಾರ್ಗದರ್ಶನದಲ್ಲೇ ಬೆಳೆದ ಇವರು ಮುಂದೆ ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟು ತಮ್ಮದೇ ಆದ ಸ್ವತಂತ್ರ ಹಾದಿಯನ್ನು ನಿರ್ಮಿಸಿಕೊಂಡರು. 1963ರಲ್ಲಿ ತೆರೆಕಂಡ 'ಸಂತ ತುಕಾರಾಮ' ಚಿತ್ರದ ಮೂಲಕ ಗೀತರಚನೆಕಾರರಾಗಿ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದ ಉದಯಶಂಕರ್ ಅವರು ತಮ್ಮ ಮೊದಲ ಚಿತ್ರದಲ್ಲೇ ಅರ್ಥಪೂರ್ಣ ಸಾಲುಗಳ ಮೂಲಕ ಭರವಸೆಯ ಸಾಹಿತಿಯಾಗಿ ಗುರುತಿಸಿಕೊಂಡರು. ಮುಂದೆ ವರನಟ ಡಾ. ರಾಜಕುಮಾರ್ ಅವರೊಂದಿಗಿನ ಇವರ ಸುದೀರ್ಘ ವೃತ್ತಿಪರ ಒಡನಾಟ ಕನ್ನಡ ಸಿನಿಮಾರಂಗದಲ್ಲಿ ಹೊಸ ಇತಿಹಾಸವನ್ನೇ ಸೃಷ್ಟಿಸಿತು. ರಾಜಕುಮಾರ್ ಅವರ ಅಭಿನಯ, ಕಂಠಸಿರಿ ಮತ್ತು ಧ್ವನಿಗೆ ಸೂಕ್ತವಾಗುವಂತಹ ಹಾಡುಗಳು ಹಾಗೂ ಸಂಭಾಷಣೆಗಳನ್ನು ಹೆಣೆಯುವುದರಲ್ಲಿ ಉದಯಶಂಕರ್ ಸಿದ್ಧಹಸ್ತರಾಗಿದ್ದರು. ಇವರಿಬ್ಬರ ಕಾಂಬಿನೇಷನ್ ಕನ್ನಡ ಚಿತ್ರರಂಗದ ಪಾಲಿಗೆ ಸುವರ್ಣಯುಗವನ್ನು ತಂದಿಟ್ಟಿತು. ಅಣ್ಣಾವ್ರ ಅಭಿನಯದ ಅತಿಹೆಚ್ಚು ಚಿತ್ರಗಳಿಗೆ ಸಂಭಾಷಣೆಗಾರರಾಗಿ ಕೆಲಸ ಮಾಡಿದ್ದು ಮಾತ್ರವಲ್ಲದೆ ಅಣ್ಣಾವ್ರ ಆತ್ಮೀಯರಾಗಿ ಉಳಿದರು. ಅಣ್ಣಾವ್ರ ಸಿನಿಮಾ ತಯಾರಾಗುವ ಸಂದರ್ಭದಲ್ಲಿ ಅಣ್ಣಾವ್ರ ಸಹೋದರ ವರದರಾಜ್ ಅವರೊಂದಿಗೆ ಕತೆ ಮತ್ತು ಸಿನಿಮಾದ ಬಗ್ಗೆ ಚರ್ಚಿಸುತ್ತಿದ್ದರು. ಎಲ್ಲಾ ಸರಿಯಾಗಿ ಆದಮೇಲೆಯೇ ಸಂಭಾಷಣೆಯನ್ನು ಒದಗಿಸುತ್ತಿದ್ದರು. ಯಾಕೆಂದರೆ ಚಿತ್ರಗಳ ಬಗ್ಗೆ ಅತಿಯಾದ ವ್ಯಾಮೋಹ ಮತ್ತು ನೆನಪಲ್ಲಿರುವಂತಹ ಸಾಹಿತ್ಯ ನನ್ನದಾಗಬೇಕೆಂಬುದು ಉದಯಶಂಕರ್ ಅವರ ಬಯಕೆಯಾಗಿತ್ತು. ಆ ಉದ್ದೇಶದಿಂದಲೇ ಉದಯಶಂಕರ್ ಅವರು ಚಿತ್ರಗಳಿಗೆ ಸಂಭಾಷಣೆಗಳನ್ನು, ಹಾಡುಗಳನ್ನು ಬರೆಯಬೇಕಾದರೆ ಅವರ ಬರವಣಿಗೆಯಲ್ಲಿ ತನ್ನ ಅತೀ ದೊಡ್ಡ ಹೆಗ್ಗುರುತು ಎಂದರೆ ಅವರ ಸಾಹಿತ್ಯದಲ್ಲಿದ್ದ ಸಾಟಿಯಿಲ್ಲದ ಸರಳತೆ. ಶೃಂಗಾರ, ಭಕ್ತಿ, ತತ್ವಚಿಂತನೆ, ವಾತ್ಸಲ್ಯ, ವಿರಹ ಹಾಗೂ ಹಾಸ್ಯ ಹೀಗೆ ಪ್ರತಿಯೊಂದು ರಸವನ್ನೂ ಸಾಮಾನ್ಯ ಜನರಿಗೂ ಅರ್ಥವಾಗುವಂತೆ ಬರೆಯುವುದು ಇವರ ಶಕ್ತಿಯಾಗಿತ್ತು. "ಆಡಿಸಿ ನೋಡು ಬೀಳಿಸಿ ನೋಡು", "ನಾವಾಡುವ ನುಡಿಯೇ ಕನ್ನಡ ನುಡಿ", "ಪೂಜಿಸಲೆಂದೆ ಬಂದಿಹೆವು" ಮುಂತಾದ ಸಾರ್ವಕಾಲಿಕ ಹಿಟ್ ಹಾಡುಗಳು ಇಂದಿಗೂ ಪ್ರತಿಯೊಬ್ಬ ಕನ್ನಡಿಗನ ನಾಲಿಗೆಯ ಮೇಲಿವೆ. ಕೇವಲ ಹಾಡುಗಷ್ಟೇ ಅಲ್ಲದೆ, 'ಬಂಗಾರದ ಮನುಷ್ಯ', 'ಮಯೂರ', 'ಬಬ್ರುವಾಹನ', 'ಭಾಗ್ಯವಂತ' ನಾಗರಹಾವು, ಚಕ್ರವ್ಯೂಹ ಮುಂತಾದ ಚಿತ್ರಗಳಿಗೆ ಇವರು ಬರೆದ ಗಂಭೀರ ಮತ್ತು ಪ್ರಭಾವಶಾಲಿ ಸಂಭಾಷಣೆಗಳು ಸಿನಿಮಾಗಳಿಗೆ ಜೀವ ತುಂಬಿದವು. ತಮ್ಮ ಮೂರು ದಶಕಗಳಿಗೂ ಹೆಚ್ಚಿನ ಸುದೀರ್ಘ ವೃತ್ತಿಜೀವನದಲ್ಲಿ ಇವರು ಮೂರು ಸಾವಿರಕ್ಕೂ ಹೆಚ್ಚು ಚಲನಚಿತ್ರ ಗೀತೆಗಳನ್ನು ಹಾಗೂ ಐನೂರಕ್ಕೂ ಹೆಚ್ಚು ಚಿತ್ರಗಳಿಗೆ ಸಂಭಾಷಣೆಯನ್ನು ಬರೆದು ದಾಖಲೆ ನಿರ್ಮಿಸಿದರು. ಜೊತೆಗೆ ಭಕ್ತಿಗೀತೆಗಳನ್ನು ಕೂಡ ಬರೆದಿದ್ದಾರೆ. ಇಷ್ಟು ಮಾತ್ರವಲ್ಲದೆ 1968ರಲ್ಲಿ ಅವರು 'ಮಂಕುದಿನ್ನೆ' ಚಿತ್ರವನ್ನು ನಿರ್ದೇಶನ ಮಾಡಿದ್ದರು. ಉದಯಶಂಕರ್ ಅವರು 'ಹಾಲು ಜೇನು', 'ನೀ ನನ್ನ ಗೆಲ್ಲಲಾರೆ', 'ಜೀವನ ಚಕ್ರ' (1985), 'ಹಳ್ಳಿ ರಂಭೆ ಬೆಳ್ಳಿ ಬೊಂಬೆ' ಮತ್ತು 'ಆನಂದ್' ಮುಂತಾದ ಚಲನಚಿತ್ರಗಳಲ್ಲಿ ನಟಿಸಿದ್ದಾರೆ ಕೂಡ. ಕನ್ನಡ ಚಿತ್ರರಂಗಕ್ಕೆ ಇವರು ನೀಡಿದ ಕೊಡುಗೆಗಾಗಿ ಹಲವು ಬಾರಿ ಪ್ರಶಸ್ತಿ ಸೇರಿದಂತೆ ಸಾಲು ಸಾಲು ಗೌರವಗಳು ಇವರಿಗೆ ಲಭಿಸಿದವು. 'ಕುಲಗೌರವ' 'ನಾಗರಹಾವು' 'ಪ್ರೇಮದಕಾಣಿಕೆ' 'ಜೀವನಚೈತ್ರ' ಮುಂತಾದ ಚಿತ್ರಗಳಿಗೆ ಸಂಭಾಷಣೆಗಾಗಿ ರಾಜ್ಯಪ್ರಶಸ್ತಿಗಳು ಉದಯಶಂಕರ್ ಅವರ ಮುಡಿಗೇರಿತು. 'ಭಾಗ್ಯದಲಕ್ಷ್ಮೀ ಬಾರಮ್ಮಾ' ಮತ್ತು 'ಆನಂದ್' ಚಿತ್ರಗಳ ಚಿತ್ರಕತೆಗಾಗಿ ಖ್ಯಾತ ನಿರ್ದೇಶಕ ಸಿಂಗೀತಂ ಶ್ರೀನಿವಾಸ್ ಅವರ ಜೊತೆ ರಾಜ್ಯ ಪ್ರಶಸ್ತಿಯನ್ನು ಹಂಚಿಕೊಂಡರು. ಇಂತಹ ಮಹಾನ್ ಸಾಧಕ ಜುಲೈ 3, 1993ರಂದು ಅವರು ಇಹಲೋಕ ತ್ಯಜಿಸಿದರು, ಅವರು ಬರೆದುಹೋದ ಅಮರ ಗೀತೆಗಳು ಮತ್ತು ಧ್ವನಿಸುವ ಮಾತುಗಳ ಮೂಲಕ ಪ್ರತಿಯೊಬ್ಬ ಕನ್ನಡಿಗನ ಹೃದಯದಲ್ಲೂ ಜೀವಂತವಾಗಿದ್ದಾರೆ. ಕನ್ನಡ ಬೆಳ್ಳಿಪರದೆಯ ಇತಿಹಾಸದಲ್ಲಿ ಅವರ ಸಾಹಿತ್ಯ ಸೇವೆ ಸದಾ ಅಜಾರಮರವಾಗಿ ಉಳಿದಿದೆ. ಚಿತ್ರರಂಗದಲ್ಲಿ ಸಾಹಿತ್ಯ ಸರದಾರನೆಂದೇ ಹೆಸರು ಗಳಿಸಿರುವ ಚಿ ಉದಯಶಂಕರ್ ಅವರು ನಮ್ಮ ಕರಾವಳಿ ತರಂಗಿಣಿ ಪತ್ರಿಕೆಯ ಈ ವಾರದ ಸಿನಿಲೋಕದ ಧ್ರುವತಾರೆಯಾಗಿದ್ದಾರೆ. KT












ಎನ್ನಾರ್ ಕೆ ವಿಶ್ವನಾಥ್
ENNAR K VISHWANATH




KARAVALI THARANGINI Weekly Owned, Editor, Published & Printed by Lalithasri Preetham Rai No.2-64/54(12), Pushparaj Nilaya, Jayanagara, 3rd 'A' Maroli Village, Dakshina Kannada, Karnataka - 575005.
email: karavalitharangini@gmail.com, web: karavalitharangini.com ph: 9880109212 Printed at Bhima Samskruthi Printers & Publishers, No 1182 14th Main Road Prakash Nagar, Bengaluru Karnataka-560021